ರಾಜಕುಮಾರ್ ಸಿನಿಮಾಗಳಲ್ಲಿ ಬರುವ ಕಾಡುಪ್ರಾಣಿಗಳು ಹಾಗೂ ಸಾಕುಪ್ರಾಣಿಗಳು ಭಾರತದ 'ಕೂಡು ಕುಟುಂಬ'ದ ರೂಪಕಗಳು. ಬದುಕನ್ನು ಇತರ ಸಹ–ಜೀವಿಗಳೊಂದಿಗೆ ಹಂಚಿಕೊಳ್ಳಬೇಕೆಂಬ ವಿವೇಕವನ್ನು ಕಲಿಸಬಂದ ಸಿನಿಮಾ ರೂಪದ ಪಠ್ಯಗಳು.

**ಗೋವಿಂದರಾಜು ಎಂ. ಕಲ್ಲೂರು**



# ವರನಟನ ಮೂರು ಚಿತ್ರಗಳು

ಇಪ್ಪತ್ತು ವರ್ಷಗಳ ಹಿಂದೆ ನನ್ನ ಊರಿನ ಬಹುತೇಕ ಪೆಟ್ಟಿಗೆ ಅಂಗಡಿಗಳಲ್ಲಿ, ಕಟಿಂಗ್ ಅಂಗಡಿಗಳಲ್ಲಿ, ಹೋಟೆಲ್‌ಗಳಲ್ಲಿ ಸಿನಿಮಾ ಪೋಸ್ಟರ್‌ಗಳನ್ನು ಅಂಟಿಸಿರುತ್ತಿದ್ದರು. ಅದರಲ್ಲಿ ರಾಜಕುಮಾರರ ಸಿನಿಮಾದ ತರಹೇವಾರಿ ಚಿತ್ರಗಳೂ ಇರುತ್ತಿದ್ದವು. ರಾಜ್ ಅಭಿಮಾನಿಗಳ ಮನೆ–ಅಂಗಡಿಗಳಲ್ಲಿ ಅಂಟಿಸಿರುತ್ತಿದ್ದ ಪೋಸ್ಟರ್‌ಗಳನ್ನೇ ನನ್ನೂರಿನ ರೈತರು ಎತ್ತಿನ ಬಂಡಿಗೂ ಬರೆಸುತ್ತಿದ್ದರು. ರಾಜಕುಮಾರರ ಚಿತ್ರಗಳಲ್ಲಿದ್ದು ವರ್ಚಸ್ಸಿಗೆ ಮೆರುಗನ್ನು ತರುತ್ತಿದ್ದ ಟಗರು, ಪಾರಿವಾಳ, ಎಮ್ಮೆಯೊಂದಿಗಿನ ವರನಟನ ಚಿತ್ರಗಳು ಇಂದಿಗೂ ಮಾರುಕಟ್ಟೆಯಲ್ಲಿವೆ. ರಾಜಕುಮಾರ್ ಜೊತೆಗೆ ನಟಿಸಿದ ನಟ, ಸಹನಟಿಯರಷ್ಟೇ ಜನಪ್ರಿಯವಾದ ಈ ಪ್ರಾಣಿ–ಪಕ್ಷಿ ಜೋಡಿಗಳನ್ನು ಕನ್ನಡದ ಜನಮಾನಸ ಮರೆಯುವುದುಂಟೇ? ಅಂಥಾ ಮೂರು ಚಿತ್ರಗಳಲ್ಲಿ ಮೊದಲನೆಯದು: ಟಗರು (ಮೈಲಾರಿ) ಮತ್ತು ರಾಜಕುಮಾರ್ ಚಿತ್ರ.

'ಮೈಲಾರಿ'ಯೆಂಬುದು 'ಬಂಗಾರದ ಪಂಜರ' (1974) ಸಿನಿಮಾದಲ್ಲಿ ಬರುವ ಒಂದು ಟಗರಿನ ಹೆಸರು. ಬಂಗಾರದ ಪಂಜರ ಆಧುನಿಕತೆಯ ವಿಕಾರಗಳನ್ನು ವ್ಯಂಗ್ಯ ಮಾಡುತ್ತಲೇ ಹಳ್ಳಿಯ ಜನರಲ್ಲಿನ ಕೂಡುಕುಟುಂಬದ ಮತ್ತು ಪಟ್ಟಣದ ಜನರ ವಿಘಟನೆಯ ಮನೋಭಾವವನ್ನು ಪರದೆಯ ಮೇಲೆ ತಂದ ಸಿನಿಮಾ. ಸಿರಿವಂತರ ಸುಖದ ವ್ಯಾಖ್ಯಾನ ಮತ್ತು ಶ್ರಮಿಕ ವರ್ಗದ ನೆಮ್ಮದಿಯ ವ್ಯಾಖ್ಯಾನ, ಹಳ್ಳಿಯ ಕುಟುಂಬವೊಂದರ ಜೀವನ ಸ್ವಾತಂತ್ರ್ಯ ಮತ್ತು ನಗರ ಜೀವನದ ನಿಯಮಗಳ ನಡುವಿನ ಸಂಘರ್ಷವನ್ನು ನಿರೂಪಿಸಿದ ಸಿನಿಮಾವೂ ಹೌದು.

## ಆತ್ಮಸಖ ಟಗರು, ಔದಾರ್ಯದ ಪಾರಿವಾಳ ಹಾಗೂ ಮಹಿಷಮಂಡಲದ ಎಮ್ಮೆ

ಈ ಸಿನಿಮಾದಲ್ಲಿನ ಮೈಲಾರಿ ಎಲ್ಲ ಟಗರುಗಳಂತೆ ಆಡು–ಕುರಿಗಳ ಹಿಂದೆ ಓಡುವ ಟಗರಲ್ಲ. ಅಥವಾ ದೇವರ ಮುಂದೆ ಮೈ ಕೊಡವಿ, ತಲೆ ತಗ್ಗಿಸಿ ನಿಲ್ಲಲೆಂದೇ ಕೊಬ್ಬಿಸಿದ ಮಾಂಸದ ಮುದ್ದೆಯೂ ಅಲ್ಲ. ಇದು ನಾಯಕ(ಬೀರ)ನ ಆತ್ಮಸಖ; 'ಬಂಗಾರದ ಪಂಜರ' ಸಿನಿಮಾಕ್ಕೊಂದು ಲವಲವಿಕೆಯ ಭಾಷೆಯನ್ನು ನಿರ್ಮಿಸಿ ಸಿನಿಮಾದ ಉದ್ದಕ್ಕೂ ಪ್ರೇಕ್ಷಕರನ್ನು ನಾಯಕನೊಂದಿಗೆ ಬೆಸೆಯುವ ಕೊಂಡಿ.

ಕೊಬ್ಬಿದ ಮೈಯನ್ನೂ ಬಲಿಷ್ಠವಾದ ಕೋಡುಗಳನ್ನೂ ಹೊಂದಿರುವ ಮೈಲಾರಿಗೆ ಕಪ್ಪುಬಿಳುಪಿನ ಹೇಳಿ ಮಾಡಿಸಿದಂತಹ ಸೊಗಸಾದ ತುಪ್ಪಟದ ಹೊದಿಕೆಯಿದೆ. ಹೆಜ್ಜೆ ಇಟ್ಟಾಗೆಲ್ಲಾ ಗಲ್ಲೆನ್ನುವ ಪುಟ್ಟ ಗಂಟೆ ಕೊರಳಲ್ಲಿದೆ. ಇಂಥಾ ಗಂಟೆಗಳನ್ನು ಹಾಕಿಕೊಂಡು ತಿರುಗುವ ಮಾಲಾಧಾರಿಗಳ ಗಂಟೆ ಸದ್ದಿಗೆ ಮೇಕೆ–ಟಗರೋ, ಕರು–ದನವೋ ಎಂದು ನಾವೆಲ್ಲರೂ ತಿರುಗಿ ನೋಡುವ ಕಾಲವೂ ನವೆಂಬರ್–ಜನವರಿ ತಿಂಗಳಿನಲ್ಲಿ ಬರುತ್ತದೆ. ಈ ಮೈಲಾರಿ ಯಾವ ದೇವರಯಾತ್ರೆಯ ಉದ್ದೇಶವೂ ಇಲ್ಲದೆ ಗಂಟೆ ಧರಿಸಿ ಸಿನಿಮಾ ಉದ್ದಕ್ಕೂ ಮೆರೆದಾಡುತ್ತದೆ.

ಸಿನಿಮಾದ ನಾಯಕ ಹರೆಯಕ್ಕೆ ಬಂದ ಕಾಲಕ್ಕೆ ಆತನ ನಿಜವಾದ ಬಳಗ ಬಂದು ಅವನನ್ನು ಹಳ್ಳಿಯಿಂದ ಪಟ್ಟಣದ ಮನೆಗೆ ಕರೆದೊಯ್ಯುವಾಗ ನಾಯಕನ ಜೊತೆಗೇ ಬರುವ ಟಗರು ಮನೆ ಪ್ರವೇಶದ ನಂತರ ಅಲ್ಲಿ ಸೃಷ್ಟಿಸುವ ಹಾಸ್ಯ ಸನ್ನಿವೇಶಗಳನ್ನು ಸಿನಿಮಾ ನೋಡಿಯೇ ಸವಿಯಬೇಕು. ಸಿನಿಮಾದಲ್ಲಿ ವರನಟನ ಸಂಗಾತಿಯಂತಿರುವ ಮೈಲಾರಿಯನ್ನು ನೋಡುವ ಎಂತಹ ಮಾಂಸಪ್ರಿಯರಿಗಾದರೂ ನಾವು ಇಂತಹದ್ದೊಂದು ಟಗರನ್ನು ಪ್ರೀತಿಗೆ ಸಾಕಬೇಕಲ್ಲ ಎನಿಸದಿರದು. ಈಗ ಟಗರಿನ ವ್ಯಾಪ್ತಿ ಹಳ್ಳಿಯಿಂದ–